ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ ಅವ್ಯಕ್ತ ಮುರಳಿ 11-03-2002

# *ವಿಶೇಷತೆಗಳು ಪರಮಾತ್ಮನ ಕೊಡುಗೆಯಾಗಿವೆ - ಇದನ್ನು ವಿಶ್ವ ಸೇವೆಯಲ್ಲಿ ಅರ್ಪಣೆ ಮಾಡಿ.*

(विशेषतायें परमात्म-देन हैं - इन्हें विश्व सेवा में अर्पण करो)

ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ  ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

ಇಂದು ಗ್ರೇಟ್ ಗ್ರೇಟ್ ಗ್ರಾಂಡ್ ಫಾದರ್ ಬ್ರಹ್ಮಾ ತಂದೆ ಮತ್ತು ಶಿವತಂದೆ ತನ್ನ ವಿಶ್ವದ ನಾಲ್ಕೂ ಕಡೆಯ ಶ್ರೇಷ್ಠ ಭಾಗ್ಯವಂತ ಬ್ರಾಹ್ಮಣ ಕುಲದವರಿಗೆ ಬಹಳ ಬಹಳ ಪದಮಾ ಪದಮಾ ಭಾರಿ ದಿವ್ಯ ಅಲೌಕಿಕ ಜನ್ಮದ ಶುಭಾಶಯಗಳನ್ನು ನೀಡುತ್ತಿದ್ದಾರೆ. ಜೊತೆ ಜೊತೆಯಲ್ಲಿ ಅತಿ ಸ್ನೇಹದ ಹೃದಯಪೂರ್ವಕವಾದ ಪ್ರೀತಿಯ ಆತ್ಮಿಕ ಪುಷ್ಪಗಳಿಂದ ಜನ್ಮದಿನದ ಶುಭಾಶಯಗಳನ್ನು ನೀಡುತ್ತಿದ್ದಾರೆ. ಬಾಪ್‌ದಾದಾ ಪ್ರತಿಯೊಬ್ಬ ಬ್ರಾಹ್ಮಣ ಆತ್ಮನ ವಿಶೇಷತೆಯನ್ನು ನೋಡಿ-ನೋಡಿ ಹರ್ಷಿತವಾಗುತ್ತಿದ್ದಾರೆ ವಾಹ್! ಮಕ್ಕಳೇ ವಾಹ್ ಎಂದು ಹೃದಯಪೂರ್ವಕವಾದ ಹಾಡನ್ನು ಹಾಡುತ್ತಿದ್ದಾರೆ. ಇಂದಿನ ದಿನ ಅಮೃತವೇಳೆಯಿಂದ ಎಲ್ಲಾ ಮಕ್ಕಳ ಹೃದಯದಲ್ಲಿ ವಾಹ್ ತಂದೆಯ ಹಾಗು ನಮ್ಮ ಅಲೌಕಿಕ ಜನ್ಮದ ಖುಷಿಯ ಬಗ್ಗೆ ಹಾಡನ್ನು ಹಾಡಿಕೊಳ್ಳುತ್ತಿದ್ದರು. ಅಮೃತವೇಳೆಯಿಂದ ಮಕ್ಕಳು ಹಾಕಿದ ಅಭಿನಂದನೆಯ ಮಾಲೆಗಳನ್ನು ನೋಡಿ-ನೋಡಿ ತಂದೆಯು ಖುಷಿಯಾಗುತ್ತಿದ್ದಾರೆ. ಈ ಜನ್ಮ ದಿನವನ್ನು ಇಡೀ ಕಲ್ಪದಲ್ಲಿ ಸಂಗಮಯುಗದಲ್ಲಿ ಮಾತ್ರ ಆಚರಿಸುತ್ತಾರೆ. ಸತ್ಯಯುಗದಲ್ಲಿ ಇಂತಹ ಅಲೌಕಿಕ ಜನ್ಮದಿನವನ್ನು ಆಚರಿಸುವುದಿಲ್ಲ. ತಂದೆ ಹಾಗು ಮಕ್ಕಳ ಜನ್ಮವು ಒಂದೇ ದಿನದಲ್ಲಿ ಆಚರಿಸುವ ಇಂತಹ ವಿಚಿತ್ರ ಜನ್ಮ ದಿನ ಅಲ್ಲಿಯೂ(ಸತ್ಯಯುಗ) ಸಹ

ಇರುವುದಿಲ್ಲ. ಒಂದೇ ದಿನದಂದು ತಂದೆ ಹಾಗು ಮಕ್ಕಳ ಜನ್ಮದಿನವನ್ನು ಆಚರಿಸುವುದನ್ನು ಇದುವರೆಗೂ ಕೇಳಿದ್ದೀರಾ? ಆದರೆ ಇಂದಿನ ದಿನ ನೀವು ಮಕ್ಕಳ ಹಾಗೂ ಬಾಪ್‌ದಾದಾರವರ ಜನ್ಮವು ಒಂದೇ ದಿನದಂದು ಆಚರಿಸುತ್ತಿದ್ದೀರಿ. ವಾಹ್-ವಾಹ್ ನ ಹಾಡನ್ನು ಹಾಡುತ್ತಿದ್ದೀರಲ್ಲವೆ?

ಇಂದು ಬಾಪ್‌ದಾದಾ ಅಮೃತವೇಳೆಯಲ್ಲಿ ಒಂದು ಮಾಲೆಯನ್ನು ತಯಾರು ಮಾಡುತ್ತಿದ್ದಾರೆ. ನೂರಾ ಎಂಟರ ಫೈನಲ್ ಮಾಲೆಯನ್ನು ಮಾಡುತ್ತಿರಲಿಲ್ಲ, ಏಕೆಂದರೆ ನೀವು ಆ ಮಾಲೆಯಲ್ಲಿ ನಮ್ಮ ಹೆಸರಿರಬೇಕೆಂದು.... ಯೋಚಿಸಬಹುದು. ಆದಿ ಸ್ಥಾಪನೆಯ ಸಮಯದಿಂದ ಈಗ ವಿನಾಶ ಸಮಯದ ಸಮೀಪದವರೆಗೆ ಯಾವ ಯಾವ ಮಕ್ಕಳು ಅಮರಭವ!ದ ವರದಾನಿಯಾಗಿದ್ದಾರೆಂಬ ಮಾಲೆಯನ್ನು ಇಂದು ತಯಾರು ಮಾಡುತ್ತಿದ್ದರು. ಈ ರೀತಿಯ ಶ್ರೇಷ್ಠಾತಿ-ಶ್ರೇಷ್ಠ ಭಗವಂತನ ಜೊತೆಯಲ್ಲಿ ಸರ್ವ ಚರಿತ್ರೆಯನ್ನು ನೋಡುವ ಹಾಗೂ ಕೇಳುವಂತಹ ಶ್ರೇಷ್ಠ ಪಾತ್ರ ಡ್ರಾಮಾನುಸಾರವಾಗಿ ಈ ಚಿತ್ರಗಳಿಗೆ ಮಾತ್ರ ಪ್ರಾಪ್ತಿಯಾಗಿದೆ. ಆದರೆ ಆ ಅತ್ಮರೂ ಸಹ ಎಷ್ಟೊಂದು ಕಡಿಮೆ ಇದ್ದಾರೆ. ನಿಮ್ಮೆಲ್ಲರ ಪಾತ್ರವೂ ಇದೆ. ಏಕೆ? ಏಕೆಂದರೆ ಬಾಪ್‌ದಾದಾ ಬ್ರಾಹ್ಮಣ ವಂಶಾವಳಿಯ ಮಾಲೆಯನ್ನು ತಯಾರು ಮಾಡುತ್ತಿದ್ದರು. ಆದುದರಿಂದ ವಿಶ್ವದ ಅಂದಾಜಿನಲ್ಲಿ ಬ್ರಾಹ್ಮಣ ಅತ್ಮರೆಲ್ಲರೂ ಬಹಳ ಬಹಳ ಭಾಗ್ಯವಂತರಾಗಿದ್ದಾರೆ. ಏಕೆ? ಏಕೆಂದರೆ ಕೋಟಿಯಲ್ಲಿ ಕೆಲವರು. ಕೆಲವರಲ್ಲಿ ಕೆಲವರಾಗಿದ್ದೀರಿ, ಏಕೆಂದರೆ ವಿಶ್ವದ ಕೋಟ್ಯಾಂತರ ಆತ್ಮರಲ್ಲಿ ಕೆಲವರು ಮತ್ತು ಕೆಲವರಲ್ಲಿ ಕೆಲವರಾಗಿದ್ದೀರಿ.

ವಿಶ್ವದಲ್ಲಿ ಕೋಟ್ಯಾಂತರ ಆತ್ಮರು ಒಂದು ಕಡೆ ಇದ್ದಾರೆ, ಮತ್ತೊಂದು ಕಡೆ ಪ್ರತಿಯೊಬ್ಬ ಬ್ರಾಹ್ಮಣ ಆತ್ಮರಿದ್ದೀರಿ. ಹೀಗೆ ಬಾಪ್‌ದಾದಾ ಜನ್ಮ ದಿನದಂದು ಪ್ರತಿಯೊಬ್ಬ ಬ್ರಾಹ್ಮಣ ಮಕ್ಕಳಿಗೆ ಕೆಲವರಿಗಷ್ಟೆ ಅಲ್ಲದೆ ಎಲ್ಲಾ ಮಕ್ಕಳ ಜನ್ಮಪತ್ರಿಕೆಯನ್ನು (ಜಾತಕ) ನೋಡುತ್ತಾ, ಪ್ರತಿಯೊಬ್ಬರ ವಿಶೇಷತೆಗಳ ಮಾಲೆಯನ್ನು ಕೊರಳಿಗೆ ಹಾಕುತ್ತಿದ್ದರು. ತಾವು ಒಂದುವೇಳೆ ಹೊಸ ಮಕ್ಕಳಿರಬಹುದು. ಆದಿಯ ಮಕ್ಕಳಿರಬಹುದು, ಮದ್ಯದ ಮಕ್ಕಳಿರಬಹುದು, ಆದರೆ ವಿಶೇಷವಾಗಿದ್ದಾರೆ ಹಾಗೂ ವಿಶೇಷವಾಗಿಯೇ ಇರುತ್ತಾರೆ. ಇಡೀ ಕಲ್ಪದಲ್ಲಿ ವಿಶೇಷವಾಗಿರುತ್ತೀರಿ. ಇಡೀ ಕಲ್ಪದಲ್ಲಿ ವಿಶ್ವದ ಸರ್ವಾತ್ಮರಿಗೆ ತಾವು ಶ್ರೇಷ್ಠ ಆತ್ಮರ ಮೇಲೆ ಮಹಾನತೆಯ ದೃಷ್ಟಿಯಿರುತ್ತದೆ. ಆದುದರಿಂದ ತಾವು ತಮ್ಮ ವಿಶೇಷತೆಗಳನ್ನು ತಿಳಿದುಕೊಂಡಿದ್ದೀರಾ.... ತಿಳಿದುಕೊಂಡಿದ್ದೀರಾ? ಪ್ರತಿಯೊಬ್ಬರೂ ತಮ್ಮ ವಿಶೇಷತೆಗಳನ್ನು ತಿಳಿದುಕೊಂಡಿದ್ದೀರಾ? ಒಂದು ವೇಳೆ ತಿಳಿದುಕೊಂಡಿದ್ದರೆ ಒಂದು ಕೈಯನ್ನು ಎತ್ತಿ, ಬಹಳ ಒಳ್ಳೆಯದು. ಹಾಗದರೆ ಆ ವಿಶೇಷತೆಗಳನ್ನು ಏನು ಮಾಡುತ್ತೀರಿ. ತಮ್ಮ ವಿಶೇಷತೆಗಳನ್ನು ತಿಳಿದುಕೊಂಡಿರುವುದು ಹಾಗೂ ಅಂಗೀಕರಿಸಿರುವುದು ಬಹಳ ಒಳ್ಳೆಯದಾಗಿದೆ. ಆದರೆ ಅವುಗಳನ್ನು (ವಿಶೇಷತೆ) ಏನು ಮಾಡುತ್ತೀರಿ? ಏನು ಮಾಡುತ್ತೀರಿ? (ಸೇವೆಯಲ್ಲಿ ಉಪಯೋಗಿಸುತ್ತೇವೆ) ಬೇರೆ ರೀತಿಯಲ್ಲಿ ಉಪಯೋಗಿಸುವುದಿಲ್ಲ ತಾನೆ! ಈ ವಿಶೇಷತೆಗಳು ಪರಮಾತ್ಮನ ಕೊಡುಗೆಯಾಗಿವೆ. ಪರಮಾತ್ಮನ ಈ ಕೊಡುಗೆಯನ್ನು ವಿಶ್ವ ಸೇವೆಗೆ ಅರ್ಪಣೆ ಮಾಡಬೇಕು. ಒಂದುವೇಳೆ ವಿಶೇಷತೆಗಳನ್ನು ನಕರಾತ್ಮಕ ರೂಪದಲ್ಲಿ ಉಪಯೋಗಿಸಿದರೆ ಅದು ಅಭಿಮಾನದ ರೂಪವಾಗಿಬಿಡುತ್ತದೆ. ಏಕೆಂದರೆ ಜ್ಞಾನ ಮಾರ್ಗದಲ್ಲಿ ಬಂದ ನಂತರ, ಬ್ರಾಹ್ಮಣ ಜೀವನದಲ್ಲಿ ಬಂದ ನಂತರ ತಂದೆಯಿಂದ ತುಂಬಾ ವಿಶೇಷತೆಗಳು ಪ್ರಾಪ್ತಿಯಾಗುತ್ತವೆ, ಏಕೆಂದರೆ ತಂದೆಗೆ ಮಕ್ಕಳಾಗುವುದರಿಂದ ವಿಶೇಷತೆಗಳ ಖಜಾನೆಯ ಅಧಿಕಾರಿಯಾಗಿಬಿಡುತ್ತೀರಿ.

ಒಂದೆರಡು ವಿಶೇಷತೆಗಳಲ್ಲ, ಅನೇಕ ವಿಶೇಷತೆಗಳಿವೆ. ಈ ನೆನಪಾರ್ಥವಾಗಿ ನಿಮ್ಮ ವಿಶೇಷತೆಗಳ ವರ್ಣನೆಯನ್ನು ಹೀಗೆ ಮಾಡುತ್ತಾರೆ-ಹದಿನಾರು ಕಲಾ ಸಂಪನ್ನ, ಕೇವಲ ಹದಿನಾರು ಮಾತ್ರವಲ್ಲ. ಹದಿನಾರು ಎಂದರೆ ಸಂಪೂರ್ಣ ಎಂದರ್ಥ. ಸರ್ವ ಗುಣ ಸಂಪನ್ನ, ಸಂಪೂರ್ಣ ನಿರ್ವಿಕಾರಿ ಸ್ವರೂಪದ ತುಂಬಾ ವಿಸ್ತಾರವಿದೆ. ಹೇಳುವಾಗ ಸಂಪೂರ್ಣ ನಿರ್ವಿಕಾರಿ ಎಂದು ಹೇಳಿದರೂ ಸಹ ಆ ಸಂಪೂರ್ಣತೆಯಲ್ಲಿ ಸ್ವಲ್ಪ ವಿಸ್ತಾರವಿದೆ. ಹೀಗೆ **ವಿಶೇಷತೆಗಳು ತಂದೆಯ ಮೂಲಕ ಪ್ರತಿಯೊಬ್ಬ ಬ್ರಾಹ್ಮಣನಿಗೆ ವಾರಸತ್ವದ ರೂಪದಲ್ಲಿ ಪ್ರಾಪ್ತಿಯಾಗುತ್ತವೆ. ಆದರೆ ಆ ವಿಶೇಷತೆಗಳನ್ನು ಧಾರಣೆ ಮಾಡಬೇಕು. ನಂತರ ಸೇವೆಯಲ್ಲಿ ತೊಡಗಿಸಬೇಕು. ಈ ವಿಶೇಷತೆಗಳು ಪರಮಾತ್ಮನ, ಕೊಡುಗೆಯಾಗಿವೆ. ನಿಮ್ಮ ವಿಶೇಷತೆಗಳನ್ನು ಪರಮಾತ್ಮನ ಕೊಡುಗೆಯೆಂದು ತಿಳಿದುಕೊಳ್ಳುವುದರಿಂದ ಆ ವಿಶೇಷತೆಯಲ್ಲಿ ಪರಮಾತ್ಮನ ಶಕ್ತಿಗಳು ತುಂಬಲ್ಪಡುತ್ತವೆ. ಒಂದುವೇಳೆ ನನ್ನ ವಿಶೇಷತೆಗಳೆಂದು ಹೇಳಿದರೆ ಅಭಿಮಾನ ಹಾಗೂ ಅಪಮಾನ ಎರಡನ್ನು ಎದುರಿಸಬೇಕಾಗುವುದು, ಯಾವುದೇ ರೀತಿಯ ಅಭಿಮಾನವಾಗಿರಬಹುದು. ಒಂದುವೇಳೆ ಜ್ಞಾನದ, ಯೋಗದ ಸೇವೆಯ, ಬುದ್ಧಿಯ, ಯಾವುದೇ ಗುಣದ... ಈ ರೀತಿ ಯಾವುದೇ ಅಭಿಮಾನವಿದ್ದಾಗ ಅದರ ಗುರುತು -ಅವರಿಗೆ ಅತೀ ಬೇಗ ಅಪಮಾನದ ಅನುಭವವಾಗುತ್ತದೆ.** ಹೀಗೆ ನೀವು ವಿಶೇಷ ಆತ್ಮರಾಗಿದ್ದೀರಿ ಅರ್ಥಾತ್ ಪರಮಾತ್ಮನ ಕೊಡುಗೆಗೆ ಅಧಿಕಾರಿಗಳಾಗಿದ್ದೀರಿ ಹೇಗಾದರೆ ಇಂದು ತಾವೆಲ್ಲರೂ ಬಾಪ್‌ದಾದಾರವರ ಜನ್ಮದಿನವನ್ನು ಆಚರಿಸಲು ಬಂದಿದ್ದೀರಲ್ಲವೆ! ಹಾಗೆಯೇ ಬಾಪ್‌ದಾದಾ ತಮ್ಮೆಲ್ಲರ ಜನ್ಮದಿನವನ್ನು ಆಚರಿಸಲು ಬಂದಿದ್ದಾರೆ. ನೀವು ಕೇವಲ ಬಾಪ್‌ದಾದಾ ಇಬ್ಬರ ಜನ್ಮದಿನವನ್ನು ಆಚರಿಸುವಿರಿ. ಆದರೆ ಬಾಪ್‌ದಾದಾ ಇಡೀ ಬ್ರಾಹ್ಮಣ ಕುಲದ ಜನ್ಮದಿನವನ್ನು ಆಚರಿಸಲು ಬಂದಿದ್ದಾರೆ. ಒಂದುವೇಳೆ ನೀವು ದೇಶದಲ್ಲಿ ದೂರ ಕುಳಿತಿರಬಹುದು. ವಿದೇಶದ ಯಾವುದೇ ಮೂಲೆಯ ದೂರದಲ್ಲಿ ಕುಳಿತಿರಬಹುದು. ಆದರೆ ಯಾರೆಲ್ಲಾ ಬ್ರಾಹ್ಮಣ ಆತ್ಮರು ಬ್ರಾಹ್ಮಣ ಕುಲದವರಾಗಿದ್ದಾರೆಯೋ ಅವರೆಲ್ಲರ ಜನ್ಮದಿನವನ್ನು ಬಾಪ್‌ದಾದಾರವರು ಆಚರಿಸುತ್ತಾರೆ. ನೀವು ಸಹ ಸರ್ವರ ಜನ್ಮದಿನವನ್ನು ಆಚರಿಸುತ್ತಿದ್ದೀರಲ್ಲವೆ, ಅಥವಾ ಕೇವಲ ಇಲ್ಲಿ ಕುಳಿತಿರುವವರ ನೆನಪಷ್ಟೇ ಇದೆಯೇ! ಇಡೀ ವಿಶ್ವದ ಬ್ರಾಹ್ಮಣರ ನೆಪಿದೆಯಲ್ಲವೇ. ನಮ್ಮ ಜನ್ಮದಿನವನ್ನು ಸಹ ಆಚರಿಸುತ್ತಿದ್ದಾರೆಂದು ಎಲ್ಲರೂ ನೋಡುತ್ತಿದ್ದಾರೆ. ಆದುದರಿಂದ ಇಡೀ ಬ್ರಾಹ್ಮಣ ಕುಲದ ಜನ್ಮದಿನವನ್ನು ಆಚರಿಸುತ್ತಿದ್ದೀರಲ್ಲವೇ, ಎಲ್ಲರಿಗೂ ಜನ್ಮದಿನದ ಶುಭಾಶಯಗಳು ಶುಭಾಶಯಗಳು-ಶುಭಾಶಯಗಳು, ಆಚರಣೆ ಮಾಡುವುದೆಂದರೆ ಉತ್ಸಾಹ ಉಲ್ಲಾಸದಲ್ಲಿ ಬರುವುದು. ವಾಹ್! ನಮ್ಮ ಅಲೌಕಿಕ ಜನ್ಮದಿನ! ಎಂಬ ಹೃದಯಪೂರ್ವಕವಾದ ಉತ್ಸಾಹವಿದೆಯಲ್ಲವೆ.

ಹೀಗೆ ಇಂದು ಅಮೃತವೇಳೆಯಿಂದ ಎಲ್ಲರಲ್ಲೂ ಜನ್ಮದಿನದ ಉತ್ಸಾಹ ಉಲ್ಲಾಸಗಳು ಬಹಳ ಇರಬೇಕಲ್ಲವೆ! ಬಾಪ್‌ದಾದಾರವರು ನಿಮ್ಮ ಕಾರ್ಡ್ ನ್ನು ನೋಡಿದರು. ನೀವು ಈ ನೇತ್ರಗಳಿಂದ ನೋಡುತ್ತೀರಿ, ಬಾಪ್‌ದಾದಾ ನಿಮಗಿಂತಲೂ ಮೊದಲೇ ಸೂಕ್ಷದಲ್ಲಿ ನೋಡಿಬಿಡುತ್ತಾರೆ. ಎಲ್ಲರೂ ತಮ್ಮ ಮನಃಪೂರ್ವಕ ಉಲ್ಲಾಸವನ್ನು ತೋರಿಸುವ ಸಲುವಾಗಿ ಎಷ್ಟೊಂದು ಉತ್ಸಾಹ ಉಲ್ಲಾಸ ಇಡುತ್ತೀರೆಂದು ಬಾಪ್‌ದಾದಾರವರು ನೋಡಿದರು. ಈ ವರ್ತಮಾನದಲ್ಲಿ ಈ-ಮೇಲ್ ತುಂಬಾ ಸುಲಭವಾಗಿಬಿಟ್ಟಿದೆಯಲ್ಲವೆ! ಹೀಗೆ ಎಲ್ಲರು ಬಹಳ ಈ-ಮೇಲ್‌ಅನ್ನು ಮಾಡುತ್ತಾರೆ. ಬಾಪ್‌ದಾದಾರವರ ಬಳಿ ತಲುಪುತ್ತಿರುತ್ತದೆ. ಒಂದುವೇಳೆ ಈ-ಮೇಲ್ ಆಗಿರಬಹುದು, ಕಾರ್ಡ್ ಆಗಿರಬಹುದು. ಪತ್ರವಾಗಿರಬಹುದು. ಮನಸ್ಸಿನ ಸಂಕಲ್ಪವಾಗಿರಬಹುದು. ಒಂದುವೇಳೆ ಅಮೃತವೇಳೆಯಿಂದ ನಾಲ್ಕಾರು

ಕಡೆಯ ಕಾರ್ಡ್, ಪತ್ರ, ಈ-ಮೇಲ್, ಸಂಕಲ್ಪಗಳೆಲ್ಲವನ್ನು ಒಂದು ಕಡೆ ಸೇರಿಸಿ ನೋಡಿದರೆ ತುಂಬಾ ಮಜಾ ಬರುತ್ತದೆ. ಈ ಪ್ರದರ್ಶನ ವಿಚಿತ್ರವಾಗಿರುತ್ತದೆ. ಜನ್ಮದಿನದಂದು ತಮ್ಮ ಮುಂದಿನ ಜೀವನಕ್ಕಾಗಿ ಸಂಕಲ್ಪ ಮಾಡುತ್ತಾರೆ. ಜನ್ಮದಿನದ ಸಂಖ್ಯೆ ಮುಂದುವರೆಯುವಂತಹದಾಗಿರುತ್ತದೆ. ಹೇಗೆ ಆರವತ್ತೈದರಿಂದ ಆರವತ್ತಾರು ಆಯಿತಲ್ಲವೆ! ಈ ರೀತಿ ವರ್ಷವು ಮುಂದುವರೆಯುವಂತೆ ಪುರುಷಾರ್ಥದಲ್ಲಿ ಅಥವಾ ತಮ್ಮ ಅಮೂಲ್ಯ ಜೀವನದಲ್ಲಿ. ಮನದಲ್ಲಿ ಅರ್ಥಾತ್ ಸಂಕಲ್ಪದಲ್ಲಿ, ಬುದ್ಧಿಯ ನಿರ್ಣಯಶಕ್ತಿಯಲ್ಲಿ. ಮಾತಿನಲ್ಲಿ. ಸೆಕೆಂಡಿನಲ್ಲಿ ಸಫಲತಾಮೂರ್ತಿಯನ್ನಾಗಿ ಮಾಡುವ ಶಕ್ತಿಯಲ್ಲಿ, ಸಂಬಂಧ ಸಂಪರ್ಕದಲ್ಲಿ ಪ್ರತಿಯೊಂದು ಸಮಯ, ಸಂಪರ್ಕ, ಸಂಬಧದವರಿಗೆ ಒಂದಲ್ಲಾ-ಒಂದು ಪ್ರಾಪ್ತಿಯ ಅನುಭೂತಿಯಾಗಬೇಕು. ಈ ರೀತಿ ತಮ್ಮ ಮುಂದಿನ ಭವಿಷ್ಯದ ಜೀವನಕ್ಕಾಗಿ ದೃಡ ಸಂಕಲ್ಪದ ವ್ರತವನ್ನು ಮಾಡಿದ್ದೀರಾ? ಏಕೆಂದರೆ ಶಿವಜಯಂತಿಯ ದಿನದಂದು ಬ್ರಾಹ್ಮಣಾತ್ಮರಿಗೆ ವಿಶೇಷವಾಗಿ ಎರಡು ಲಕ್ಷ್ಯಗಳಿರುತ್ತವೆ. ಮೊದಲನೆಯದಾಗಿ ಸ್ವಯಂನೊಂದಿಗೆ ಪ್ರತಿಜ್ಞೆ ಮಾಡುವುದು. ಎರಡನೆಯದಾಗಿ ತಂದೆಯನ್ನು ಪ್ರತ್ಯಕ್ಷ ಮಾಡುವ ಸಲುವಾಗಿ ಧ್ವಜಾರೋಹಣ ಮಾಡುವುದು. ಈ ಎರಡು ವಿಶೇಷ ಲಕ್ಷ್ಯಗಳು ಈ ದಿನದಂದು ಪ್ರತಿಯೊಬ್ಬರ ಮನಸ್ಸಿನಲ್ಲಿರುತ್ತದೆ. ಹೀಗೆ ಬಾಪ್‌ದಾದಾರವರು ತಾವೆಲ್ಲರು ಹಿಂದೆ ಮಾಡಿರುವ ಪ್ರತಿಜ್ಞೆಗಳ ಲೆಕ್ಕವನ್ನು ನೋಡಿದರು. ಪ್ರತಿಯೊಂದು ವರ್ಷ ಪ್ರತಿಯೊಬ್ಬರು ವಿಧಿಪೂರ್ವಕ ಸಂಕಲ್ಪದಿಂದ, ವಾಣಿಯಿಂದ ಪ್ರತಿಜ್ಞೆಯನ್ನು ಮಾಡಿದ್ದೀರಿ. ಬಹಳ ಒಳ್ಳೆಯದೇ ಮಾಡಿದ್ದೀರಿ. ಆದರೆ ಈಗ ಈ ದಿನದ ನಂತರ ಅರ್ಥಾತ್ ಜನ್ಮದಿನ ಆಚರಣೆ ಮಾಡಿದ ಮೇಲೆ ಈ ಒಂದು ಶಬ್ದಕ್ಕೆ ವಿಶೇಷ ಅಂಡರ್‌ಲೈನ್ ಮಾಡಿಕೊಳ್ಳಬೇಕು. ಆ ಶಬ್ದ ಹೊಸದೇನಲ್ಲ. ಸಾಮಾನ್ಯ ಶಬ್ದವಾಗಿದೆ. ಅದು ನಿರಂತರ ದೃಢತೆ, ಒಮ್ಮೊಮ್ಮೆ ದೃಢತೆ, ಒಮ್ಮೊಮ್ಮೆ ಹುಡುಗಾಟಿಗೆ ಇರಬಾರದು. ನಿರಂತರ ಪ್ರತಿಯೊಂದು ಸಂಕಲ್ಪ, ಮಾತು, ಕರ್ಮದ ಮೂಲಕ ಸ್ವಯಂ. ಸೇವೆಯಲ್ಲಿ ಹಾಗು ಸಂಬಂಧದಲ್ಲಿ 100%ರಷ್ಟು ಸಫಲತೆಯೇ ನಿರಂತರ ದೃಢತೆಯ ಚಿಹ್ನೆಯಾಗಿದೆ. ಎಲ್ಲಿಯವರೆಗೆ ಎಲ್ಲಾ ಬ್ರಾಹ್ಮಣರಲ್ಲಿ ಸದಾ ಸಫಲತೆಯು ಕಡಿಮೆ ಇರುತ್ತದೆಯೋ ಅಲ್ಲಿಯವರೆಗೆ ನಾಟಕದನುಸಾರ ತಡವಾಗಿ ಪ್ರತ್ಯಕ್ಷತೆಯಾಗುತ್ತದೆ. ಸಫಲತೆಯು ಪ್ರತ್ಯಕ್ಷತೆಯ ಆಧಾರವಾಗಿದೆ. ಆದುದರಿಂದ ಪ್ರತಿಯೊಂದು ಮಾತು ಹಾಗು ಸಂಕಲ್ಪ ಸಫಲತಾ ಪೂರ್ವಕವಾಗಿರಲಿ. ಇದನ್ನು ಈ ಸಮಯದ ನೆನಪಾರ್ಥವಾಗಿ ಗುರುಗಳೆಂದು ಹೇಳಿಕೊಳ್ಳುವಂತಹವರಿಗೆ ಸತ್‌ವಚನ ಮಹಾರಾಜ ಎಂದು ಹೇಳಲಾಗುತ್ತದೆ. ಒಂದುವೇಳೆ ಅವರು ಸುಳ್ಳನ್ನು ಸಹ ಹೇಳುತ್ತಿರುತ್ತಾರೆ. ಆದರೆ ಭಕ್ತರು ಸತ್ಯ ವಚನವೆಂದು ಹೇಳುತ್ತಾರೆ. ಇದು ನಿಮ್ಮ ವಚನದ ಗಾಯನವಾಗಿದೆ. ಮಹಾರಾಜ, ಮಹಾನ್ ಅಂತು ನೀವೇ ಆಗುತ್ತೀರಲ್ಲವೆ. ಆದುದರಿಂದ ಸತ್ಯ. ನನ್ನ ಭಾವ ಆ ರೀತಿ ಇರಲಿಲ್ಲ ಆದರೆ ಹೇಳಿಬಿಟ್ಟೆ. ಮಾತು ಬಂದುಬಿಟ್ಟಿತು. ಭಾವ, ಭಾವನೆ ಇಲ್ಲದೇ ಎಂದಿಗೂ ಮಾತು ಹೊರಬರುವುದಿಲ್ಲ ಹಾಗೆ ಹೇಳುತ್ತಿದ್ದೀರಿ ಎಂದರೆ ಅದು ತಪ್ಪಿಸಿಕೊಳ್ಳುವುದಾಗುತ್ತದೆ ಹಾಗೆ ಬಂದುಬಿಟ್ಟಿತು ಎಂದು ಒಮ್ಮೊಮ್ಮೆ ಹೇಳುತ್ತಿದ್ದೀರಿ ಹಾಗೆ ಏಕೆ ಬಂದುಬಿಟ್ಟಿತು ಕಂಟ್ರೋಲ್ ಪವರ್ ಇಲ್ಲದೆ ಬಂದುಬಿಟ್ಟಿತೇ? ಹಾಗಾಗಿ ಬಿಟ್ಟಿತು ಎನ್ನುತ್ತಿದ್ದೀರಿ ಅರ್ಥಾತ್ ನೀವು ರಾಜರಲ್ಲವೇ? ಯಾವುದೋ ಒಂದು ಕರ್ಮೇಂದ್ರಿಯಕ್ಕೆ ವಶೀಭೂತವಾಗಿ ಬಿಟ್ಟಿದ್ದೀರಲ್ಲವೇ? ಆದ್ದರಿಂದಲೇ ಮಾತು ಆ ರೀತಿ ಬಂದುಬಿಟ್ಟಿತು ಅಥವಾ ಹಾಗೆ ಆಗಿಬಿಟ್ಟಿದೆ ಎನ್ನುತ್ತಿದ್ದೀರಿ.

ಈ ವರ್ಷ ಶುಭಾಶಯಗಳೊಂದಿಗೆ ಪ್ರತಿಯೊಂದು ವಿಷಯದಲ್ಲಿ ನಿರಂತರ ದೃಡತೆಯ ಮೇಲೆ ಅಂಡರ್ ಲೈನ್ ಮಾಡಿಕೊಳ್ಳಿರಿ. ಇಂದು ಇಂದು ಜನ್ಮದಿನವಾಗಿರುವ ಕಾರಣ ಬಾಪ್‌ದಾದಾರವರು ಬೇರೆ ಏನೂ ಹೇಳುವುದಿಲ್ಲ. ಆದರೆ

ಎಲ್ಲರ ದಿನಚರಿಯಲ್ಲಿ ಬಾಪ್‌ದಾದಾರವರು ಒಂದು ವಿಷಯವನ್ನು ಗಮನಿಸಿದ್ದಾರೆ. ಆದರೆ ಕೊನೆಯ ಬಾರಿ ಹೇಳುತ್ತೇನೆ. ಇಂದು ಆಚರಿಸಿಕೊಳ್ಳುತ್ತಿದ್ದೀರಿ ಆದ್ದರಿಂದಲೇ ಹೇಳಬಾರದು 15 ದಿನಗಳ ನಂತರ ಹೇಳುತ್ತೇನೆ. (ಬಾಪ್‌ದಾದಾ ಈಗ ಹೇಳಿದರೆ ಹದಿನೈದು ದಿನಗಳದೊಳಗೆ ಸರಿಯಾಗಿ ಬಿಡುತ್ತದೆ) ಒಳ್ಳೆಯದು, ಈಗ ಒಂದುವೇಳೆ ಹದಿನೈದು ದಿನಗಳಲ್ಲಿ ಸರಿಹೋಗುವುದಾದರೆ ಈಗಲೇ ಹೇಳುವುದು ಸರಿಯಿದೆ. ಈ ರೀತಿ ಹದಿನೈದು ದಿನಗಳಲ್ಲಿ ಪರಿವರ್ತನೆ ಆಗಿಬಿಟ್ಟಾಗ. ಬಾಪ್‌ದಾದಾ ಏನು ಮಾಡಬಹುದೆಂದು ಗೊತ್ತಿಲ್ಲ! ಹಾಗಾದರೆ ಹೇಳಿಬಿಡಲೇ? ಪಾಂಡವರೇ ಹೇಳೋಣವೇ? ಹದಿನೈದು ದಿನಗಳಲ್ಲಿ ಪರಿವರ್ತನೆ ಆಗಿಬಿಡುತ್ತದೆಯೇ? ಸಂಕಲ್ಪ ಮಾಡುತ್ತೀರಲ್ಲವೇ? ಚೆನ್ನಾಗಿದೆ. ಹೇಳಿದರೆ ಪಾಂಡವರು ಮಾಡುತ್ತೀರಲ್ಲವೇ? ಹೇಳುವುದೇನೋ ಸಹಜವಾಗಿದೆ. ನೀವು ಮಾಡುತ್ತೀರಾ? ಮಾಡಬೇಕಾಗುತ್ತದೆ. (ಬಾಪ್‌ದಾದಾರವರು ಹಿಂದೆ ಇರುವವರನ್ನು, ಮಾತೆಯರನ್ನು ಶಿಕ್ಷಕಿ ಸಹೋದರಿಯರನ್ನು, ಡಬಲ್ ವಿದೇಶದವರೆಲ್ಲರನ್ನೂ ಕೇಳುತ್ತಾ. ಎಲ್ಲರಿಂದ ಕೈಯನ್ನು ಎತ್ತಿಸಿದರು). ಎಲ್ಲರೂ ಕೈಯನ್ನು ಬಹಳ ಚೆನ್ನಾಗಿ ಎತ್ತಿ ಬಿಡುತ್ತಾರೆ. ಡಬಲ್ ವಿದೇಶದಿಂದ ಮೂರು ಗ್ರೂಪ್ ಇದೆಯಲ್ಲವೇ? (ಅಂತರ್ಮುಖಿ, ಮಸ್ತಾನ, ಶಕ್ತಿ ಗ್ರೂಪ್)

ಒಳ್ಳೆಯದು. ಅಂತರ್ಮುಖಿ ಗ್ರೂಪ್ ಕೈಯನ್ನು ಎತ್ತಿರಿ. ಅಂತರ್ಮುಖಿ ಗ್ರೂಪ್ ನಲ್ಲಿ ಕಡಿಮೆ ಇದ್ದಾರೆ. ಮಸ್ತಾನ್ ಎರಡನೆಯ ಗ್ರೂಪ್ ಆಗಿದೆ. ಒಳ್ಳೆಯದು ಮಸ್ತಾನ ಗ್ರೂಪ್‌ನವರು ನಿಂತುಕೊಳ್ಳಿರಿ. ಸದಾ ಮಸ್ತಿಯಲ್ಲಿ ಇರುವವರಲ್ಲವೇ! ಮಸ್ತಾನ ಎಂಬ ಪದದ ಅರ್ಥವೇನು? ಸದಾ ತಲ್ಲೀನರಾಗಿರುವವರಲ್ಲವೆ! ಶಕ್ತಿ ಮೂರನೆಯ ಗ್ರೂಪ್ ಆಗಿದೆ. ಶಕ್ತಿ ಗ್ರೂಪ್ ಶಕ್ತಿಶಾಲಿಯಾಗಿದೆಯಲ್ಲವೆ? ಹೆಸರುಗಳು ಬಹಳ ಚೆನ್ನಾಗಿವೆ ನೋಡಿ! ಯಜ್ಞದ ಆದಿಯಲ್ಲಿ ಭಟ್ಟಿ ನಡೆಯುವಾಗ ನಿಮ್ಮ ಗ್ರೂಪ್ ಗಳ ಹೆಸರುಗಳೇನು? (ಡಿಸೈನ್ ಯುನಿಟಿ ಮನೋಹರ್ ಪಾರ್ಟಿ, ಸುಪ್ರೀಮ್ ಪಾರ್ಟಿ) ಹೆಸರಗಳೇನು ಸುಂದರವಾಗಿವೆಯಲ್ಲವೆ? ಹೀಗೆ ಈ ಗ್ರೂಪ್ ಸಹ ಚೆನ್ನಾಗಿವೆ. ಹೆಸರು ನೆನಪಿದ್ದಾಗ ಹೆಸರಿನ ಜೊತೆಯಲ್ಲಿ ಕರ್ತವ್ಯವು ಸಹ ನೆನಪಿರುತ್ತದೆ. ಡಬಲ್ ವಿದೇಶದ ಕುಮಾರರು ನಿಂತುಕೊಳ್ಳಿರಿ. ಒಳ್ಳೆಯದು. ಇದು ಕುಮಾರರ ಗ್ರೂಪ್ ಆಗಿದೆ. ಬಾಪ್‌ದಾದಾರವರು ಡಬಲ್ ವಿದೇಶದ ರಿಫ್ರೆಶ್ಮೆಂಟಿನ ಸಮಾಚಾರವನ್ನು ಕೇಳುತ್ತಾ ತುಂಬಾ ಚೆನ್ನಾಗಿ ಮಾಡಿದ್ದೀರಿ. ಬಾಪ್‌ದಾದಾ ಮನಃಪೂರ್ವಕವಾಗಿ ಅಭಿನಂದನೆಗಳನ್ನು ಕೊಡುತ್ತಿದ್ದಾರೆ. ಆದರೆ ಈ ಎಲ್ಲಾ ಗ್ರೂಪ್ಸ್ ಸಹ ಹಿಂದಿನ ಯಾವ ಮಾತನ್ನು ಅಂಡರ್‌ಲೈನ್ ಮಾಡಬೇಕಾಗಿದೆಯೋ. ಅದನ್ನು ಸಹ ನೆನಪು ಮಾಡುತ್ತಿದ್ದಾರೆ.

ಡಬಲ್ ವಿದೇಶದ ಶಿಕ್ಷಕಿ ಸಹೋದರಿಯರು (ಟೀಚರ್ಸ್) ತುಂಬಾ ಇದ್ದಾರೆ. ಟೀಚರ್ ಆಗುವುದು ಬಹಳ ಶ್ರೇಷ್ಠ ಭಾಗ್ಯದ ಚಿಹ್ನೆಯಾಗಿದೆ. ಏಕೆಂದರೆ ಬಾಪ್‌ದಾದಾ ಟೀಚರ್ಸ್‌ಅನ್ನು ಗುರು ಸಹೋದರರ ರೂಪದಲ್ಲಿ ನೋಡುತ್ತಾರೆ. ತನ್ನ ಸಮಾನ ರೂಪದಲ್ಲಿ ಏಕೆ ನೋಡುತ್ತಾರೆಂದರೆ ಟೀಚರ್ಸಗೆ ತಂದೆಯ ಆಸನದಲ್ಲಿ ಕುಳಿತುಕೊಳ್ಳುವ ಅಧಿಕಾರ ಪ್ರಾಪ್ತಿಯಾಗುತ್ತದೆ. ಗುರುಗಳ ಗದ್ದಿಯಿರುವಂತೆ ಇದು ಮುರಳಿಯ ಸಿಂಹಾಸನವಾಗಿದೆ. ಇಲ್ಲಿ ಮುರಳಿ ಧಾರಣೆ ಮಾಡಿಸಬೇಕು ಹಾಗು ಹೇಳಬೇಕು. ಮುರಳಿಯನ್ನು ಹೇಳುವುದಷ್ಟೇ ಅಲ್ಲ ಧಾರಣೆಯನ್ನು ಸಹ ಮಾಡಿಸಬೇಕು. ಬಾಪ್‌ದಾದಾರವರು ಟೀಚರ್ಸ್ ಗೆ ಗುರು ಸಹೋದರ ಆಸನವನ್ನು ಕೊಟ್ಟಿದ್ದಾರೆ ಹಾಗು ವಿದೇಶದಲ್ಲಿ ಅತೀ ಬೇಗ ಸಿಂಹಾಸನಾಧಿಕಾರಿಗಳಾಗಿಬಿಡುತ್ತಾರೆ. ಈ ರೀತಿ ಧೈರ್ಯದಿಂದ ಜವಾಬ್ದಾರಿ ಕಿರೀಟವನ್ನು ಧಾರಣೆ ಮಾಡುವುದು ಕಡಿಮೆ ಮಾತೇನಲ್ಲ ಎಂದು ಬಾಪ್‌ದಾದಾರವರು ಖುಷಿ ಪಡುತ್ತಿದ್ದಾರೆ. ಆದರೆ ಗುರು ಸಹೋದರ ಅರ್ಥಾತ್ ತಂದೆಯ ಸಮಾನ.

ಎಲ್ಲರೂ ತಂದೆಯ ಸಮಾನರಾದರೆ ಟೀಚರ್ಸ್ ಗೆ ವಿಶೇಷವಾಗಿ ಜವಾಬ್ದಾರಿಯ ಕಿರೀಟವು ಪ್ರಾಪ್ತಿಯಾಗುತ್ತದೆ. ಬಾಪ್‌ದಾದಾರವರಿಗೆ ಟೀಚರ್ಸ್ ನ ಸಂಘಟನೆ ತುಂಬಾ ಇಷ್ಟವಾಗುತ್ತದೆ. ಆದರೆ ಇಂದಿನ ಈ ವಿಶೇಷ ಶಬ್ದವು ನಿರಂತರ ಅಟೆಂಶನ್ ಇರಬೇಕು.

ಒಳ್ಳೆಯದು, ಭಾರತದ ಟೀಚರ್ಸ್ ನಿಂತುಕೊಳ್ಳಿ. ಭಾರತದವರು ಸಹ ಕಡಿಮೆಯಲ್ಲ. ಕೇಳಿದಿರಲ್ಲವೇ. ತಂದೆ ಟೀಚರ್ಸನ್ನು ಯಾವ ದೃಷ್ಟಿಯಿಂದ ನೋಡುತ್ತಾರೆ. ಈ ಮುರಳಿ ಹೇಳುವ ಸ್ಥಾನ.... ತುಂಬಾ ಭಾಗ್ಯವಂತರಾಗಿದ್ದೀರಿ. ತುಂಬಾ ಲಕ್ಕಿಯಾಗಿದ್ದೀರಿ, ಏಕೆಂದರೆ ಸಾಕಾರ ರೂಪದಲ್ಲಿ ಯಾರು ನಿಮಿತ್ತರಾಗಿದ್ದಾರೆ? ಒಳ್ಳೆಯದು. ದಾದಿಯರಂತು ಒಬ್ಬರು ವಿದೇಶದಲ್ಲಿ, ಮತ್ತೊಬ್ಬರು ಮಧುಬನದಲ್ಲಿರುತ್ತಾರೆ. ಆದರೆ ಪ್ರತಿಯೊಂದು ಸ್ಥಾನದಲ್ಲಿ ಸಾಕಾರ ರೂಪದಲ್ಲಿ ಟೀಚರ್ಸ್ ನಿಮಿತ್ತರಾಗಿದ್ದಾರೆ. ಅಥವಾ ಪಾಂಡವರು ಸಹ ನಿಮಿತ್ತ ಇದ್ದಾರೆಯೇ ಕೇವಲ ಟೀಚರ್ಸಷ್ಟೇ ಅಲ್ಲ, ಪಾಂಡವರು ಸಹ ಇದ್ದಾರೆಯೇ. ಅವರನ್ನು ಹಿರಿಯ ಸಹೋದರರೆಂದು ಹೇಳುತ್ತಿರಲ್ಲವೇ. ಅವಶ್ಯವಾಗಿ ಪಾಂಡವರು ಇರುತ್ತಾರೆ ಶಕ್ತಿಯರು ಹಾಗೂ ಪಾಂಡವರು ಇಬ್ಬರಿಂದಲೂ ಆದಿಯಿಂದ ಕಾರ್ಯವು ನಡೆಯುತ್ತಾ ಬಂದಿದೆ. ಪಾಂಡವರ ಸಂಖ್ಯೆ ಕಡಿಮೆ ಇರಬಹುದು. ಆದರೆ ವಿಶ್ವ ಕಿಶೋರ್ ದಾದಾ ಇದ್ದರಲ್ಲವೇ? ಆನಂದ ಕಿಶೋರ್, ವಿಶ್ವಕಿಶೋರ್ ಆರಂಭದವರಾಗಿದ್ದಾರೆ. ಹೀಗೆ ಪಾಂಡವರು ಸಹ ಜೊತೆಯಲ್ಲಿದ್ದಾರಲ್ಲವೇ? ಆದರೆ ಬಹಳ ಟೀಚರ್ಸ್ ನಿಮಿತ್ತರಾಗುತ್ತಾರೆ. ಪಾಂಡವರು ಬ್ಯಾಕ್ ಬೋನ್ (ಆಧಾರ) ಆಗಿದ್ದೀರಿ, ಟೀಚರ್ಸ್ ಸಹ ಬ್ಯಾಕ್ ಬೋನ್ ಆಗಿದ್ದೀರಿ. ಪ್ರತಿಯೊಬ್ಬರಿಗೂ ತಮ್ಮದೇ ಆದ ಪಾತ್ರವಿದೆ. ಆದರೆ ಡಬಲ್ ವಿದೇಶದ ಪಾಂಡವರು ಸಹ ಟೀಚರ್ಸ್ ಆಗುತ್ತಾರೆ. ಭಾರತದಲ್ಲಿ ಪಾಂಡವರು ಟೀಚರ್ಸ್ ಆಗುವುದು ಕಡಿಮೆ. ಆದರೆ ಬಾಪ್‌ದಾದಾ ಟೀಚರ್ಸಿಗೆ ಈ ಮಾತನ್ನು ತಿಳಿಸಿಕೊಡುತ್ತಿದ್ದಾರೆ **ಟೀಚರ್ಸ್ ಅರ್ಥಾತ್ ತಮ್ಮ ಜೀವನದಿಂದ ತಂದೆಯನ್ನು ಸಾಕ್ಷಾತ್ಕಾರ ಮಾಡಿಸುವವರಾಗಿದ್ದಾರೆ. ತಮ್ಮ ಈ ಜೀವನದಿಂದ ತಮ್ಮ ಭವಿಷ್ಯ ಸ್ಪಷ್ಟವಾಗಿ ಕಾಣಿಸುತ್ತದೆ ಇಂತಹ ಟೀಚರ್ಸ್ ಆಗಿದ್ದೀರಲ್ಲವೇ. ನಿಮ್ಮನ್ನು ನೋಡಿ ಬಾಪ್‌ದಾದಾರವರ ಪಾಲನೆಯ ಅನುಭವ ಆಗಬೇಕು. ಪರಮಾತ್ಮನ ಶಕ್ತಿಗಳು ತಮ್ಮ ಮಾತು ಹಾಗು ಚೆಹರೆಯಿಂದ ಕಾಣಬೇಕು. ಇಂತಹ ಟೀಚರ್ ಹೇಳಿದರು ಎಂದು ಹೇಳಬಾರದು. ಬಾಪ್‌ದಾದಾರವರು ಟೀಚರ್ಸಿನ ಜೀವನದಿಂದ ಅನುಭವ ಮಾಡಿಸಿದರೆಂದು ಹೇಳಬೇಕು. ಬಾಬಾರವರೊಂದಿಗೆ ಎಲ್ಲರ ಸಂಬಂಧ ಜೋಡಿಸುವುದು – ಇದೇ ಶಿಕ್ಷಕರ ಕರ್ತವ್ಯವಾಗಿದೆ.** ಪ್ರತಿಯೊಬ್ಬರ ಹೃದಯದಿಂದ ಪ್ರತೀ ಸಮಯ ಬಾಬಾ ಎಂದೇ ಬರಲಿ. ಪ್ರತಿಯೊಬ್ಬರ ಈ ಗ್ರೂಪ್ಸ್ ಸಹ ಚೆನ್ನಾಗಿ ಮಾಡಿದ್ದಾರೆ ಏಕೆಂದರೆ ವ್ಯಕ್ತಿಗತ ರಿಫ್ರೆಶ್ಮೆಂಟ್ ಸಿಗುವುದರಿಂದ ಉತ್ತಮ ಅನುಭೂತಿಯನ್ನು ಮಾಡುತ್ತಾರೆ. ಗ್ರೂಪ್ನಲ್ಲಿ ಉತ್ತಮವಾದ ಫಲಿತಾಂಶ ಸಿಗುತ್ತದೆ. ಇದು ಒಳ್ಳೆಯದೇ ಆಗಿದೆ.

**ನಾಲ್ಕೂ ಕಡೆಯ ಜನ್ಮೋತ್ಸವವನ್ನು ಆಚರಣೆ ಮಾಡುವಂತಹ ಶ್ರೇಷ್ಠ ಬ್ರಾಹ್ಮಣ ಆತ್ಮರಿಗೆ, ಸದಾ ಅಲೌಕಿಕ ಜನ್ಮದ ಅಲೌಕಿಕ ದಿವ್ಯ ಕರ್ತವ್ಯವನ್ನು ಮಾಡುವಂತಹ ಶ್ರೇಷ್ಠ ಆತ್ಮರಿಗೆ, ಸದಾ ಒಬ್ಬ ತಂದೆಯಲ್ಲದೇ ಬೇರೆ ಯಾರೂ ಇಲ್ಲ. ಇಂತಹ ಏಕ್‌ನಾಮಿ ಹಾಗು ಸರ್ವ ಖಜಾನೆಗಳ ಎಕಾನಮಿಯ ಅವತಾರ ಮಕ್ಕಳಿಗೆ, ಸದಾ ಪ್ರತಿಯೊಂದು ವರದಾನ ಹಾಗೂ ಆಸ್ತಿಯನ್ನು ಜೀವನದ ಮೂಲಕ ಪ್ರತ್ಯಕ್ಷ ಮಾಡುವ ಉತ್ಸಾಹ ಉಲ್ಲಾಸದಲ್ಲಿರುವ ಮಕ್ಕಳಿಗೆ ಬಾಪ್‌ದಾದಾರವರ ಅಲೌಕಿಕ ಜನ್ಮದಿನದ ಶುಭಾಶಯಗಳೊಂದಿಗೆ ನೆನಪು, ಪ್ರೀತಿ ಹಾಗು ನಮಸ್ತೆ.**

ದಾದಿಯರೊಂದಿಗೆ : ದಾದೀಜಿಯವರು ಬಾಪ್‌ದಾದಾರವರಿಗೆ ಜನ್ಮದಿನದ ಸಲುವಾಗಿ ಬಹಳ ಬಹಳ ಅಭಿನಂದನೆಗಳನ್ನು ಸಲ್ಲಿಸಿದರು. ಇಂದಿನ ಮಾಲೆಯಲ್ಲಿ ತಾವೆಲ್ಲರೂ ಸೇರಿರುವಿರಿ. ಮಾಲೆಯನ್ನು ನೆನಪು ಮಾಡಿಕೊಳ್ಳಲಾಯಿತಲ್ಲವೇ. ನೀವು ಆದಿಯ ಸ್ಥಾಪನೆಯ ರತ್ನ, ಈ ಮಾಲೆಯಲ್ಲೂ ನೀವು ಮಣಿಯಾಗಿದ್ದೀರಿ. ಸ್ಥಾಪನೆಯಲ್ಲೂ ನಿಮಿತ್ತರಾಗಿ, ಪಾಲನೆಯಲ್ಲೂ ನಿಮಿತ್ತರಾಗಿ ಈಗ ತಂದೆಯ ಜೊತೆ ಹಿಂತಿರುಗಲು ಸಹ ನಿಮಿತ್ತರಾಗುತ್ತೀರಲ್ಲವೆ, ಮನೆಯ ಬಾಗಿಲನ್ನು ಬಾಪ್‌ದಾದಾ ಒಬ್ಬರೇ ತೆರೆಯುವರೇ? (ತೆರೆಯುವುದಿಲ್ಲ) ನಿಮಗಾಗಿ ತಡೆಯಲಾಗಿದೆ. ನೀವು ಬಂದರೆ ಬಾಗಿಲು ತೆರೆಯಬಹುದು. ಆದರೆ ಸೇವೆಯನ್ನು ಸಂಪೂರ್ಣ ಮಾಡಬೇಕಾಗುತ್ತದೆ. ಏಕೆಂದರೆ ಸಾಕಾರದಲ್ಲಿ ತಮ್ಮನ್ನು ನಿಮಿತ್ತ ಮಾಡಲಾಗಿದೆ. ಸಾಕಾರನ ಈ ಕರ್ತವ್ಯವನ್ನು ಪೂರ್ತಿ ಮಾಡಬೇಕಾಗುವುದು. ಇಂದು ಎಲ್ಲರು ಯಾರನ್ನು ನೋಡುತ್ತಾರೆ? ಎಲ್ಲರ ದೃಷ್ಟಿ ಯಾರ ಕಡೆ ಹೋಗುತ್ತದೆ? ನಿಮ್ಮ ಕಡೆಯೇ ಹೋಗುತ್ತದೆಯಲ್ಲವೆ? ನಿಮಿತ್ತರಾಗಿರುವ ಕಡೆ ಈ ಎಲ್ಲರ ದೃಷ್ಟಿ ಹೋಗುತ್ತದೆ. ಎಲ್ಲರ ದೃಷ್ಟಿಯಲ್ಲಿ ತಾವಿದ್ದೀರಿ. ತಂದೆಯ ದೃಷ್ಟಿ ಅಂತು ಬೇಹದ್ದಿನ ದೃಷ್ಟಿ ಆಗಿದೆ. ಆದುದರಿಂದ ತಾವೆಲ್ಲರು ತಂದೆಯ ನಯನಗಳಲ್ಲಿ ಇದ್ದೀರಿ. ಎಲ್ಲರು ಕಣ್ಮಣಿಗಳಾಗಿದ್ದೀರಿ, ಬಹಳ ಒಳ್ಳೆಯದು. ಪ್ರತಿಯೊಬ್ಬರು ತಮ್ಮ ತಮ್ಮ ಪಾತ್ರವನ್ನು ಅಭಿನಯ ಮಾಡುತ್ತಿದ್ದಾರೆ ಹಾಗು ಮಾಡಲೇ ಬೇಕು. ಏಕೆಂದರೆ ತಮ್ಮ ನಾಟಕದಲ್ಲಿ ಬಂಧಿಸಲ್ಪಟ್ಟಿದ್ದಾರೆ. ಮಜಾ ಅನಿಸುತ್ತದೆಯಲ್ಲವೆ, ತುಂಬಾ ಒಳ್ಳೆಯದು.

ರಿವೈಸ್ ಕೋರ್ಸ್ 11-03-2002.
**ವಿಶೇಷತೆಗಳು ಪರಮಾತ್ಮನ ಕೊಡುಗೆಯಾಗಿವೆ- ಇದನ್ನು ವಿಶ್ವಸೇವೆಯಲ್ಲಿ ಅರ್ಪಣೆ ಮಾಡಿರಿ.**

ನೀವೆಲ್ಲರೂ ಹೊಸಬರಾದರೂ, ಆದಿಯವರಾಗಿದ್ದರೂ, ಮಧ್ಯದವರಾಗಿದ್ದರೂ, ವಿಶೇಷವಾದವರು ಮತ್ತು ವಿಶೇಷವಾಗಿಯೇ ಇರುತ್ತೀರಿ. ವಿಶ್ವದಲ್ಲಿ ಸರ್ವಾತ್ಮರ ದೃಷ್ಟಿ ಇಡೀ ಕಲ್ಪವೆಲ್ಲಾ ಶ್ರೇಷ್ಠಾತ್ಮರಾದ ನಿಮ್ಮ ಶ್ರೇಷ್ಠತೆಯ ಮೇಲೆಯೇ ಇರುತ್ತದೆ. ವಿಶೇಷತೆ ಎಂಬುದು ಪರಮಾತ್ಮ ಕೊಟ್ಟಿರುವ ಕೊಡುಗೆಯಾಗಿದೆ. ಪರಮಾತ್ಮನ ಕೊಡುಗೆಯನ್ನು ಸದಾ ವಿಶ್ವಸೇವೆಯಲ್ಲಿ ಉಪಯೋಗಿಸಬೇಕು. ಪರಮಾತ್ಮನ ಕೊಡುಗೆ ಎಂದು ಭಾವಿಸಬೇಕು. ಪರಮಾತ್ಮ ಕೊಟ್ಟಿರುವಂತೆ ಭಾವಿಸಿದರೆ ಆ ವಿಶೇಷತೆಯಲ್ಲಿ ಪರಮಾತ್ಮನ ಶಕ್ತಿಗಳು ತುಂಬುತ್ತವೆ. ನನ್ನದು ಎಂದುಕೊಳ್ಳುವುದರಿಂದ ಅಭಿಮಾನ ಮತ್ತು ಅಪಮಾನ ಎರಡನ್ನು ಎದುರಿಸಬೇಕಾಗಿರುತ್ತದೆ. ವಿಶೇಷ ಆತ್ಮರು ಅರ್ಥಾತ್ ಪರಮಾತ್ಮನ ಕೊಡುಗೆಗೆ ಅಧಿಕಾರಿಗಳು ಎನ್ನುತ್ತಾ ತಂದೆ ಹೇಳಿರುತ್ತಿರುವ ಮಹಾವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಮರ್ಥ ಸಂಕಲ್ಪಗಳು.

*ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.*
ನಾನು ಆತ್ಮ ಪ್ರೇಮ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ತಂದೆ ಮತ್ತು ಮಕ್ಕಳು ಒಮ್ಮೆಯೇ ಜನಿಸಿರುವ ಈ ವಿಚಿತ್ರ ಅಲೌಕಿಕ ಜನ್ಮದಿನವನ್ನು ನಾನು ಸಂಗಮ ಯುಗದಲ್ಲಿಯೇ ಆಚರಿಸಿಕೊಳ್ಳುತ್ತಿದ್ದೇನೆ.

2. ನಾನು ಅಮರ ಭವ!ದ ವರದಾನಿಯಾಗಿ ತಂದೆಯೊಂದಿಗೆ ಸರ್ವ ಚರಿತ್ರೆಯನ್ನು ನೋಡುವ ಅಥವಾ ಕೇಳುವ ಶ್ರೇಷ್ಠ ಪಾತ್ರಧಾರಿಯಾಗಿದ್ದೇನೆ.

3. ಬ್ರಾಹ್ಮಣಾತ್ಮನಾದ ನಾನು ಬಹಳ ಬಹಳ ಬಹಳ ಭಾಗ್ಯವಂತನು.

4. ವಿಶ್ವದಲ್ಲಿ ಸರ್ವಾತ್ಮರ ದೃಷ್ಟಿ ಕಲ್ಪವಿಡೀ ಶ್ರೇಷ್ಠಾತ್ಮನಾದ ನನ್ನ ಶ್ರೇಷ್ಠತೆಯ ಮೇಲೆಯೇ ಇದೆ.

5. ನನಗೆ ವಿಶೇಷತೆಗಳು ಪರಮಾತ್ಮ ಕೊಟ್ಟಿರುವ ಕೊಡುಗೆಯಾಗಿದೆ ಎಂದು ಭಾವಿಸಿ ಸದಾ ವಿಶ್ವ ಸೇವೆಯಲ್ಲಿ ಉಪಯೋಗಿಸುತ್ತಿದ್ದೇನೆ.

6. ನಾನು ತಂದೆಯವನಾಗುವುದರಿಂದ ವಿಶೇಷತೆಗಳ ಖಜಾನೆಗೆ ಅಧಿಕಾರಿಯಾಗಿದ್ದೇನೆ.

7. ನಾನು 16 ಕಲೆಗಳ ಸಂಪೂರ್ಣನು, ಸರ್ವ ಗುಣ ಸಂಪನ್ನನು, ಸಂಪೂರ್ಣ ನಿರ್ವಿಕಾರಿಯಾಗಿದ್ದೇನೆ.

8. ನನಗೆ ವಿಶೇಷತೆಗಳು ಪರಮಾತ್ಮ ಕೊಟ್ಟಿದ್ದಾರೆ ಎಂದು ಭಾವಿಸುತ್ತಿದ್ದೇನೆ. ಅವು ನನ್ನವಲ್ಲ.

9. ನಾನು ಜನ್ಮದಿನವನ್ನು ಆಚರಿಸಿಕೊಳ್ಳುವುದು ಅರ್ಥಾತ್ ಉತ್ಸಾಹ ಉಲ್ಲಾಸಗಳಲ್ಲಿ ಬರುವುದು.

10. ನಾನು ಸಂಕಲ್ಪದಲ್ಲಿ, ಬುದ್ಧಿಯಲ್ಲಿ, ನಿರ್ಣಯ ಶಕ್ತಿಯಲ್ಲಿ, ವಾಚಾದಲ್ಲಿ ಕ್ಷಣದಲ್ಲಿ ಸಫಲತಾ ಮೂರ್ತಿಯಾಗಿ ಶಕ್ತಿಯಲ್ಲಿ ಮತ್ತು ಸಂಭಂಧ-ಸಂಪರ್ಕದಲ್ಲಿ ಯಾವುದೋ ಒಂದು ಪ್ರಾಪ್ತಿಯ ಅನುಭೂತಿ ಆಗಬೇಕು ಎಂದು ದೃಢಸಂಕಲ್ಪದ ವ್ರತವನ್ನು ಇಟ್ಟಿದ್ದೇನೆ.

11. ನನ್ನ ನಿರಂತರ ಧೃಡತೆಯಿಂದ ಪ್ರತಿಯೊಂದು ಸಂಕಲ್ಪ, ಮಾತು, ಕರ್ಮದಿಂದ ಸ್ವಯಂನಲ್ಲಿ, ಸೇವೆಯಲ್ಲಿ ಮತ್ತು ಸಂಬಂಧದಲ್ಲಿ ಸಫಲತೆ ಲಭಿಸಿದೆ.

12. ನನ್ನ ಪ್ರತಿಯೊಂದು ಮಾತು, ಪ್ರತಿಯೊಂದು ಸಂಕಲ್ಪ ಸಫಲತಾಪೂರ್ವಕವಾಗಿ ಇಟ್ಟುಕೊಂಡು ಸತ್ಯವಚನ ಮಹಾರಾಜನಾಗಿ, ಮಹಾನಾಗಿ ಇದ್ದೇನೆ.